ದಿನಾಂಕಃ 22-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಸಿ.ಎ.ಎಸ್ ಪ್ರತಿವಾದಿಗಳ ಪರ ವಕೀಲರಿಂದಃ

ಈ ಹಂತದಲ್ಲಿ ಸಾಕ್ಷಿಗೆ ಸರ್ವೆ ನಂ. 52 ಕ್ಕೆ ಸಂಬಂಧಪಟ್ಟ ಮಂಜೂರಾತಿ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದು ಸದರಿ ಮಂಜೂರಾತಿ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ವರ್ಗಾವರ್ಗಿ ವ್ಯವಹಾರವು ಬರವಣಿಗೆಯಲ್ಲಿ ನಡೆಯಿತು. ಸದರಿ ವರ್ಗಾವರ್ಗಿ ಯ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯು ನೋಂದಣಿಯಾಗಿತ್ತು. ಸದರಿ ದಾಖಲೆಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ಸದರಿ ವರ್ಗಾವರ್ಗಿ ದಾಖಲೆಯು ನಿಪಿ-1 ರಿಂದ 10 ರ ಪೈಕಿ ಇರುವುದಿಲ್ಲ. ನಿಪಿ-6 ನ್ನು ನಾನೇ ಪಡೆದುಕೊಂಡು ಹಾಜರುಪಡಿಸಿದ್ದೇನೆ. ನಿಪಿ-6 ರಲ್ಲಿ ಬರೆದಿರುವ ಅಂಶಗಳನ್ನು ಓದಲು ಆಗುವುದಿಲ್ಲ. ನಿಪಿ-6 ರಲ್ಲಿ ಬರೆದಿರುವ ಅಂಶಗಳು ಕಾಣಿಸುತ್ತಿಲ್ಲ. ನಿಪಿ-6 ನ್ನು ತಾಲ್ಲೂಕು ಕಛೇರಿಯಿಂದ ಪಡೆದುಕೊಂಡು ಹಾಜರುಪಡಿಸಿರುತ್ತೇನೆ. ನೋಂದಣಿಯಾಗಿರುವ ವರ್ಗವರ್ಗಿ ದಾಖಲೆಯನ್ನು ಹಾಜರುಪಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಯು ಶಿಥಿಲಗೊಂಡಿರುವ ಕಾರಣ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ದಿನಾಂಕ 02.07.1953 ರಂದು ನೋಂದಣಿಯಾಯಿತು. ಸದರಿ ದಾಖಲೆಯು ಶಿಥಿಲಗೊಂಡಿದೆ ಎಂದು ಉಪನೋಂದಣಾಧಿಕಾರಿಗಳ ಕಛೇರಿಯಿಂದ ಹಿಂಬರಹವನ್ನು ನಾನು ಪಡೆದುಕೊಂಡಿರುವುದಿಲ್ಲ. ಸದರಿ ಹಿಂಬರಹವನ್ನು ಪಡೆದುಕೊಂಡು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಸರ್ವೆ ನಂ. 52 ರ ಬಗ್ಗೆ ನನ್ನ ತಂದೆಯವರಿಗೆ ವಿಚಾರವು ತಿಳಿದಿತ್ತು ಎಂದರೆ ಸರಿ. ಸರ್ವೆ ನಂ. 52 ರ ಆಸ್ತಿಯು ತನ್ನದೆಂದು ನನ್ನ ತಂದೆಯವರು ಯಾವುದೇ ದಾವೆಯನ್ನು ಹೂಡಿರಲಿಲ್ಲ. ನಿಪಿ-2 ರ ವಂಶವೃಕ್ಷದಲ್ಲಿ ಬರೆದಿರುವ ವಿಚಾರಗಳು ಸರಿಯಾಗಿದೆ. ನಿಪಿ-2 ರ ವಂಶವೃಕ್ಷವು ಪ್ರತಿವಾದಿಗಳಿಗೆ ಸಂಬಧಪಟ್ಟ ವಂಶವೃಕ್ಷ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ-2 ರಲ್ಲಿ ತೋರಿಸಿರುವ ತಿಪ್ಪಯ್ಯರವರು ನಮ್ಮ ಮಾವ ಎಂದು ನುಡಿಯುತ್ತಾರೆ. ಸದರಿ ತಿಪ್ಪಯ್ಯರವರೇ ಈ ದಾವೆಯ 1 ನೇ ಪ್ರತಿವಾದಿಯ

ಗಂಡ ಎಂದರೆ ಸರಿ. ಸದರಿ ತಿಪ್ಪಯ್ಯರವರೇ ಪ್ರತಿವಾದಿ 1 ಡಿ ರವರ ತಂದೆ ಎಂದರೆ ಸರಿ. ತಿಪ್ಪಯ್ಯರವರ ಮಕ್ಕಳ ಹೆಸರುಗಳನ್ನು ನಿಪಿ-2 ರಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ನಿಪಿ-2 ನ್ನು ಬರೆಸಿದಾಗ ಸದರಿ ತಿಪ್ಪಯ್ಯರವರು ಬದುಕಿರಲಿಲ್ಲ. ನಿಪಿ-2 ನ್ನು ಬರೆಸುವಾಗ ತಿಪ್ಪಯ್ಯರವರ ಹೆಂಡತಿ ಮತ್ತು ಮಕ್ಕಳ ಹೆಸರುಗಳು ನನಗೆ ತಿಳಿದಿತ್ತು. ನಿಪಿ-2 ರಲ್ಲಿ ತಿಪ್ಪಯ್ಯರವರ ಮಕ್ಕಳ ಹೆಸರುಗಳನ್ನು ತೋರಿಸಲು ನನಗೆ ತೊಂದರೆ ಇರಲಿಲ್ಲ.

ನಿಪಿ-2 ರಲ್ಲಿ ಕಾಣಿಸುವ ಗಂಗಮ್ಮರವರು ನನ್ನ ದೊಡ್ಡಮ್ಮ. ನಿಪಿ-2 ರಲ್ಲಿ ಗಂಗಮ್ಮರವರ ಮಕ್ಕಳ ಹೆಸರುಗಳನ್ನು ತೋರಿಸಿದ್ದೇವೆ ಎಂದರೆ ಸರಿ. ಸದರಿ ಗಂಗಮ್ಮರವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಗಳಲ್ಲಿ ತಮಗೆ ಭಾಗ ಬೇಡವೆಂದು ಗಂಗಮ್ಮನ ಮಕ್ಕಳು ನನಗೆ ತಿಳಿಸಿದ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಭಾಗ ಬೇಡವೆಂದು ಗಂಗಮ್ಮನ ಮಕ್ಕಳು ನನಗೆ ಲಿಖಿತ ರೂಪದಲ್ಲಿ ಬರೆದುಕೊಟ್ಟಿರುವುದಿಲ್ಲ. ಗಂಗಮ್ಮನ ಮಕ್ಕಳನ್ನು ಈ ದಾವೆಯಲ್ಲಿ Formal Parties ಆಗಿ ಸೇರಿಸುತ್ತೇನೆ ಎಂದು ನಾನು ಅವರನ್ನು ಕೇಳಿಕೊಂಡಿರುವುದಿಲ್ಲ. ನಾನು ಗಂಗಮ್ಮರವರ ಮಕ್ಕಳಿಗೆ ಈ ದಾವೆಯನ್ನು ಹೂಡುವ ಮುನ್ನ ಯಾವುದೇ ತಿಳುವಳಿಕೆ ಪತ್ರವನ್ನು ಕಳುಹಿಸಿರುವುದಿಲ್ಲ.

ನಿಪಿ-2 ರಲ್ಲಿ ಕಾಣಿಸುವ ಯಲ್ಲಮ್ಮನ ಎಲ್ಲಾ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸಹೋದರಿಯರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಇಬ್ಬರು ಸಹೋದರರ ಪೈಕಿ ನನ್ನ ದೊಡ್ಡ ಅಣ್ಣ ತೀರಿಕೊಂಡಿದ್ದಾರೆ ಹಾಗೂ ಅವರ ಹೆಂಡತಿ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ನನ್ನ ದೊಡ್ಡಣ್ಣನ ವಾರಸುದಾರರನ್ನು ಈ ದಾವೆಯಲ್ಲಿ ವಾದಿಗಳಾಗಿ ಸೇರಿಸಿರುತ್ತೇನೆ. ವಾದ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ದೊಡ್ಡಣ್ಣನಾದ ರಾಮಕೃಷ್ಣಪ್ಪರವರ ವಾರಸುದಾರರ ಹೆಸರುಗಳನ್ನು ನಿಮ್ಮ ವಾದ ಪತ್ರದಲ್ಲಿ ತೋರಿಸಿ ಎಂದು ಸಾಕ್ಷಿಗೆ ವಾದ ಪತ್ರವನ್ನು ನೀಡಲಾಗಿ ವಾದ ಪತ್ರವನ್ನು ಬರೆಸುವಾಗ ಕೈತಪ್ಪಿನಿಂದ ಅವರ ಹೆಸರುಗಳು ಬಿಟ್ಟು

ಹೋಗಿದೆ ಎಂದು ಸಾಕ್ಷಿಯು ವಾದ ಪತ್ರವನ್ನು ನೋಡಿ ನುಡಿಯುತ್ತಾರೆ. ವಾದ ಪತ್ರವನ್ನು ನೋಡಿಯೇ ಸಹಿ ಮಾಡಿರುತ್ತೇನೆ.

ನಿಪಿ-2 ರಲ್ಲಿ ತೋರಿಸಿರುವ 4 ನೇ ವ್ಯಕ್ತಿಯು ಆಂಜಿನಪ್ಪ. ಸದರಿ ಆಂಜಿನಪ್ಪರವರು ಗಂಗಪ್ಪನ ಮಗ ಎಂದರೆ ಸರಿ. ಸದರಿ ಆಂಜಿನಪ್ಪರವರಿಗೆ 7 ಮಕ್ಕಳಿದ್ದಾರೆ. ಸದರಿ ಆಂಜಿನಪ್ಪನ ಮಕ್ಕಳ ಹೆಸರು ಹನುಮಂತರಾಯಪ್ಪ, ಕಾಂತಮ್ಮ, ಶ್ರೀರಾಮ, ನಾರಾಯಣಸ್ವಾಮಿ ಹಾಗೂ ಉಳಿದ 3 ಮಕ್ಕಳ ಹೆಸರುಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹೂಡಿದ ಸಮಯದಲ್ಲಿ ಆಂಜಿನಪ್ಪರವರು ಬದುಕಿದ್ದರೋ ಇಲ್ಲವೋ ನನಗೆ ನೆನಪಿಲ್ಲ. ಸದರಿ ಆಂಜಿನಪ್ಪರವರ ಮಕ್ಕಳ ಹೆಸರುಗಳನ್ನು ನಿಪಿ-2 ರಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಹೂಡಿದಾಗ ಸದರಿ ಆಂಜಿನಪ್ಪ ಅಥವಾ ಅವರ ಮಕ್ಕಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಸದರಿ ಆಂಜಿನಪ್ಪರವರ ಮಕ್ಕಳಿಗೂ ಹಕ್ಕು ಇರುತ್ತದೆ.

ನಾನು ದಾಖಲೆಗಳನ್ನು ಓದಿ ಪರಿಶೀಲಿಸಿದ ನಂತರವೇ ಅವುಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಿಪಿ-5 ರ ಕಾಲಂ ನಂ. 10 ರಲ್ಲಿ ಎಂ.ಆರ್ ನಂ. 12/1995-96 ಎಂದು ಬರೆಯಲಾಗಿದೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಎಂ.ಆರ್ ನಂ. 12/1995-96 ಮ್ಯೂಟೇಶನ್ ರೆಜಿಸ್ಟರ್ ಪ್ರತಿಯ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಸದರಿ ಮ್ಯೂಟೇಶನ್ ರೆಜಿಸ್ಟರ್ ಪ್ರತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರ ದಾಖಲೆಯು ಸರ್ವೆ ನಂ. 52 ಕ್ಕೆ ಸಂಬಂಧಪಟ್ಟ ದಾಖಲೆಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳ ಮೂಲ ಸರ್ವೆ ನಂ. 52 ಆಗಿತ್ತು ಎಂದರೆ ಸರಿ. ನಿಡಿ-2 ರಲ್ಲಿ ನಮೂದಿಸಿರುವ ಹನುಮಂತರಾಯಪ್ಪರವರೇ ಸದರಿ ಆಂಜಿನಪ್ಪರವರ ಹಿರಿಯ ಮಗ. ನಿಡಿ-2 ರಲ್ಲಿ ಸರ್ವೆ ನಂ. 52 ರ ಜಮೀನನ್ನು ಹನುಮಂತರಾಯಪ್ಪರವರು ನನ್ನ ದೊಡ್ಡಪ್ಪನಾದ ಕುಮಾರಪ್ಪ ಬಿನ್ ಕುಮಾರಪ್ಪರವರಿಂದ ಕ್ರಯಕ್ಕೆ ಪಡೆದುಕೊಂಡರು ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹನುಮಂತರಾಯಪ್ಪರವರಿಗೆ ಯಾವುದೇ ಕ್ರಯ ಆಗಿರುವುದಿಲ್ಲ ಹಾಗೂ ಅವರು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಕ್ರಯವಾಗಿದೆ ಎಂದು ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿಕೊಂಡರು ಎಂದು ನುಡಿ

ಯುತ್ತಾರೆ. ಅವರು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡರು ಎಂದು ಏನು ಕ್ರಮವನ್ನು ಕೈಗೊಂಡಿರುವಿರಿ? ಎಂಬ ಪ್ರಶ್ನೆಗೆ ಸಾಕ್ಷಿ ಅದರ ವಿಚಾರವಾಗಿಯೇ ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಹನುಮಂತರಾಯಪ್ಪರವರನ್ನು ಈ ದಾವೆಯಲ್ಲಿ ಯಾಕೆ ಸೇರಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅವರನ್ನು ಈ ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು